142-ಸೌ/ ನಿ-72 (71)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ**

**ಸೂಚನೆ :** **ಬೆಂಗಳೂರು ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಗಲಭೆ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (NIA) ಮತ್ತು ಕೇಂದ್ರ ಅಪರಾಧ ವಿಭಾಗ (CCB) ಎರಡು ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಎರಡು ತನಿಖಾ ಸಂಸ್ಥೆಯಿಂದ ದಾಖಲಾಗಿರುವ FIR ಹಾಕಿ ಬಂಧಿಸಲಾಗಿರುವ ಜನರ ಸಂಖ್ಯೆ ಮತ್ತು ಪ್ರಕರಣದ ಬಂಧಿತರಲ್ಲಿ ಈವರೆವಿಗೂ ಹಲವಾರು ಜನರನ್ನು ಅಮಾಯಕರೆಂದು ಬಿಡುಗಡೆ ಮಾಡಿರುವ ಬಗ್ಗೆ ಹಾಗೂ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿ ನಷ್ಟ ಭರಿಸುವ ಬಗ್ಗೆ ಕೈಗೊಂಡ ಕ್ರಮದ ಕುರಿತು.**

**ಉತ್ತರ :** ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಗಲಭೆಗೆ ಸಂಬಂಧಿಸಿದಂತೆ, ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯಲ್ಲಿ 57 ಪ್ರಕರಣ ಮತ್ತು ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ 15 ಪ್ರಕರಣ ಸೇರಿದಂತೆ ಒಟ್ಟು 72 ಪ್ರಕರಣಗಳು ದಾಖಲಾಗಿರುತ್ತವೆ.

ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯಲ್ಲಿ 57 ಪ್ರಕರಣಗಳಲ್ಲಿ ಒಟ್ಟು 209 ಆರೋಪಿಗಳನ್ನು ಹಾಗೂ ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ 15 ಪ್ರಕರಣಗಳಲ್ಲಿ 217 ಆರೋಪಿಗಳು ಸೇರಿದಂತೆ, ಸದರಿ ಪ್ರಕರಣಗಳಲ್ಲಿ ಒಟ್ಟು 426 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗಿದೆ.

ಮೇಲ್ಕಂಡ ಪ್ರಕರಣಗಳಲ್ಲಿ ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯ 1)ಮೊ.ಸಂ.229/2020–138 ಮತ್ತು ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ ಮತ್ತು 2)ಮೊ.ಸಂ.195/2020–115. 7(ಬಾಲಾಪರಾಧಿಗಳು) ರ ಎರಡು ಪ್ರಕರಣಗಳು NIA ರವರಲ್ಲಿ ತನಿಖೆಯಲ್ಲಿರುತ್ತದೆ ಹಾಗೂ ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ಮೊ.ಸಂ.219–2020–31 ಪ್ರಕರಣವು ಸಿಸಿಬಿ ತನಿಖೆಯಲ್ಲಿರುತ್ತದೆ.

ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯ 1)ಮೊ.ಸಂ.229/2020ರಲ್ಲಿ ಒಟ್ಟು 138 ಆರೋಪಿಗಳು ಮತ್ತು ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ 2)ಮೊ.ಸಂ.195/2020 ರಲ್ಲಿ 115 ಆರೋಪಿಗಳು ಅದೇ ರೀತಿ ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ಮೊ.ಸಂ.219–2020ರಲ್ಲಿ 31 ಆರೋಪಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗಿದೆ.

ಸದರಿ ಗಲಭೆಗೆ ಸಂಬಂಧಿಸಿದಂತೆ, ಅಮಾಯಕರನ್ನು ದಸ್ತಗಿರಿ ಮಾಡಿರುವುದಿಲ್ಲ ಹಾಗೂ ಸದರಿ ಗಲಭೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 9287/2020ರಲ್ಲಿ ನೀಡಿರುವ ಆದೇಶದನ್ವಯ ಹಾನಿ/ನಷ್ಟದ ಅಂದಾಜು ಮಾಡುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 238 ಎಸ್‌ಎಸ್‌ಟಿ 2020, ದಿನಾಂಕ:05.09.2020ರಲ್ಲಿ ಕ್ಲೈಮ್ ಕಮೀಷನರ್ ರವರನ್ನು ನೇಮಿಸಲಾಗಿದ್ದು, ಸದರಿ ಕಾರ್ಯವು ಪ್ರಗತಿಯಲ್ಲಿರುತ್ತದೆ.

---

ಹೆಚ್‌ಡಿ 470 ಎಸ್‌ಎಸ್‌ಟಿ 2020

**(ಬಸವರಾಜ ಬೊಮ್ಮಾಯಿ)**
ಗೃಹ ಸಚಿವರು